## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.12/2016 ಡಿ . ಡಬ್ಲ್ಯೂ: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಯಾಸೀನ್ ಶರೀಫ್<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 29 –01 –2026. |

**<u>ಮುಂದುವರೆ ಪಾಟೀ ಸವಾಲು: ವಾದಿ ಪರ ವಕೀಲರಿಂದ:</u>**

ನಾನು ನನ್ನ ತಕರಾರಿನಲ್ಲಿ (ಪ್ಯಾರಾ 2 ರಲ್ಲಿ ) ವಾದಿಯು ಇನ್ನೊಂದು ಅಸಲು ದಾವೆ ಸಂಖ್ಯೆ 625/2015 ಅನ್ನು ಹಾಕಿರುತ್ತಾರೆ ಎಂಬುದರ ಬಗ್ಗೆ ತಿಳುವಳಿಕೆ ಇರುತ್ತದೆ ಎಂದರೆ ಸರಿ. ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿದ ಎಲ್ಲಾ ದಾಖಲೆಗಳು ನಿಮ್ಮ ಬಳಿ ಇವೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ನಮ್ಮ ಬಳಿ ಅಸಲು ದಾಖಲೆಗಳು ಇರುತ್ತವೆ ಎಂದು ನುಡಿಯುತ್ತಾರೆ. ನಿಡಿ–1 ನ್ನು ಸ್ಕೆಚ್ ನ್ನು ಯಾವ ದಿನಾಂಕಂದು ತಯಾರಿಸಲಾಗಿತ್ತು ಎಂಬುದರ ಬಗ್ಗೆ ನಿಮಗೆ ಮಾಹಿತಿ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ಈ ದಾಖಲೆ ನೀಡಿರುತ್ತಾರೆ ಎಂಬುದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಕಛೇರಿಯಲ್ಲಿ ಇದ್ದ ಬೇರೆ ಪಿ ಡಿ ಒ ರವರು ನ್ಯಾಯಾಲಯಕ್ಕೆ ನೀಡಿರುತ್ತಾರೆ ಆದರೆ ನಾನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ–1ರ ಲ್ಲಿ ಯಾವ ದಿನಾಂಕದಂದು ಮತ್ತು ಯಾರ ಇದನ್ನು ತಯಾರು ಮಾಡಿರುತ್ತಾರೆ ಎಂಬುದರ ಬಗ್ಗೆ ನಮೂದು ಇಲ್ಲ . ನಿಡಿ–1ರ ಅಸಲು ನಕ್ಷೆ ನಮ್ಮ ಕಛೇರಿಯಲ್ಲಿ ಇಲ್ಲ. ಮತ್ತು ನಿಡಿ–1ರ ಅಸಲು ಪ್ರತಿ ಎಲ್ಲಿ ಇದೆ ಎಂಬುದರ ಬಗ್ಗೆಯೂ ಸಹ ನನಗೆ ಗೊತ್ತಿರುವುದಿಲ್ಲ.

ಸಾಧಾರಣವಾಗಿ ಯಾವುದೇ ನಕ್ಷೆಯನ್ನು ತಯಾರು ಮಾಡುವಾಗ ಸ್ಥಳಕ್ಕೆ ಭೇಟಿ ನೀಡಿ ತಯಾರು ಮಾಡುತ್ತಾರೆ ಮತ್ತು ಸರ್ವೆಯರ್ ರವರು ಮಾಡುತ್ತಾರೆ

ಎಂದರೆ ಸರಿ. ಸಾಧಾರಣವಾಗಿ ಯಾವುದೇ ಒಂದು ನಕ್ಷೆ ಮಾಡಲು ಬಂದಾಗ ಅಲ್ಲಿ ಮಹಜರು ಕ್ರಮ ಮಾಡುತ್ತಾರೆ ಮತ್ತು ಅದರಲ್ಲಿ ದಿನಾಂಕ ಮತ್ತು ಸಮಯದ ಬಗ್ಗೆಯೂ ಸಹ ನಮೂದು ಮಾಡುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಈ ಕ್ರಮಗಳನ್ನು ಮಾಡುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮಹಜರನ್ನು ಮಾಡಿದ ಬಳಿಕ ಸ್ಥಳೀಯರು ಪಂಚಾಯಿದಾರರು ಮತ್ತು ಮೋಜಣಿ ಮಾಡಲು ಬಂದಂತಹ ವ್ಯಕ್ತಿಗಳು ಸಹಿಯನ್ನು ಮಾಡುತ್ತಾರೆ ಎಂದರೆ ಸರಿ. ನಿಡಿ–1 ಕ್ಕೆ ಸಂಬಂಧಪಟ್ಟಂತೆ ಮಹಜರನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಡಿ–1 ಕ್ಕೆ ಸಂಬಂದಪಟ್ಟಂತಹ ಅಸಲು ಮಹಜರು ನಮ್ಮ ಕಛೇರಿಯಲ್ಲಿಯೂ ಇರುವುದಿಲ್ಲ ಮತ್ತು ನಾನು ಮಹಜರನ್ನು ಸಹ ನೋಡಿ ಇರುವುದಿಲ್ಲ. ಮತ್ತು ಅಸಲು ಮಹಜರು ಎಲ್ಲಿ ಇದೆ ಎಂಬುದರ ಬಗ್ಗೆಯೂ ನನಗೆ ಗೊತ್ತಿಲ್ಲ.

ಹುಸ್ಕೂರು ಹಳ್ಳಿಯು ಶಿರಮಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಇರುತ್ತದೆ ಮತ್ತು ಇದಕ್ಕೆ ಸಂಬಂಧಟ್ಟ ಡಿಮಾಂಡ್ ರಿಜಿಸ್ಟರ್ ಗ್ರಾಮ ಪಂಚಾಯಿತಿಯಲ್ಲಿ ಎಂದರೆ ಸರಿ. ಡಿಮಾಂಡ್ ರಿಜಿಸ್ಟರ್ ಮತ್ತು ಇತರ ಎಲ್ಲಾ ಮೂಲ ವಹಿಗಳನ್ನು ನನಗೆ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಿಡಿ–2, 2019–20 ನೇ ಸಾಲಿನ ದಾಖಲೆ ಆಗಿರುತ್ತದೆ ಎಂದರೆ ಸರಿ. ಮತ್ತು ಸುಮಾರು 10 ವರ್ಷಗಳ ಹಿಂದೆಯ ದಾಖಲೆಗಳು ನಮ್ಮ ಕಛೇರಿಯಲ್ಲಿ ಇರುತ್ತವೆ ( ಡಿಮಾಂಡ್ ರಿಜಿಸ್ಟರ್ ) ಎಂದರೆ ಸರಿ. ಮತ್ತು ನಿಡಿ–2 ರ ಅಸಲು ಪ್ರತಿಯನ್ನು ನನಗೆ ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಮತ್ತು ನಿಡಿ–3 ಅಸಲು ಪ್ರತಿಯನ್ನು ನನಗೆ ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನಿಡಿ–4 ರಲ್ಲಿ ನಮೂದು ಮಾಡಿರುವ ಪ್ರಕಾರ ಅಂದರೆ ಸರ್ಕಾರದ ಸೌಲಭ್ಯಕ್ಕಾಗಿ ಮಾತ್ರ ಎಂದು ನೀವು ಬೇರೆ ದಾಖಲೆಗಳಲ್ಲಿಯೂ ಸಹ ಮಾಡುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ಎಲಾಲ ಡಿಮಾಂಡ್ ರಿಜಿಸ್ಟರ್ ನಲ್ಲಿ ನಮೂದು ಮಾಡಿರುವುದಿಲ್ಲ ಆದರೆ ನಾವು ನಿಡಿ–4 ರಲ್ಲಿ ಅಷ್ಟೇ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿಡಿ–7 ಮತ್ತು 8 ರ ಅಸಲು ಪ್ರತಿ ನಮ್ಮ

ಕಛೇರಿಯಲ್ಲಿ ಇರುವುದಿಲ್ಲ ಆದರೆ ಜೆರಾಕ್ಸ್ ಪ್ರತಿ ಇರುತ್ತದೆ ಎಂದು ನುಡಿಯುತ್ತಾರೆ. ನೀವು ಈ ನ್ಯಾಯಾಲಯದಲ್ಲಿ ಹಾಜರುಡಿಪಸಿದ ದಾಖಲೆಗಳನ್ನು ನಿಮ್ಮ ಕಛೇರಿಯಿಂದ ನೀಡಿರುವುದಿಲ್ಲ ಮತ್ತು ಈ ನ್ಯಾಯಾಲಯದಲ್ಲಿ ಇದ್ದ ಅಸಲು ದಾವೆ ಸಂಖ್ಯೆ 625/2015 ರಲ್ಲಿ ಪ್ರತಿವಾದಿಗಳು ಹಾಜರುಪಡಿಸಿದ ದಾಖಲೆಗಳನ್ನು ಈ ದಾವೆಗೆ ನೀವು ದಾಖಲೆಯಾಗಿ ದೃಢೀಕೃತ ಪ್ರತಿಯನ್ನು ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಮತ್ತು ನಮ್ಮ ಕಛೇರಿಯಲ್ಲಿ ಇದ್ದ ಅಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ಅಂಬೇಡ್ಕರ್ ಭವನ ನಿವೇಶನ ಯಾರು ಹಸ್ತಾಂತರ ಮಾಡಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಕಾರ್ಯ ನಿರ್ವಾಹಕ ಅಧಿಕಾರಿಗಳು ಹಸ್ತಾಂತರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಈ ವಿವಾದಿತ ಸ್ವತ್ತು ಗ್ರಾಮ ಠಾಣಾ ಎಂದು ತೋರಿಸಲು ನಿಮ್ಮ ಬಳಿ ಯಾವ ದಾಖಲೆಗಳು ಇವೆ ಎಂಬ ಪ್ರಶ್ನೆಗೆ ಸಾಕ್ಷಿಯು ತಹಸೀಲ್ದಾರ್ ರವರು ನಮಗೆ ದಾಖಲೆಗಳನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ ಮತ್ತು ತಹಸೀಲ್ದಾರ್ ರವರು ನೀಡಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ. ಮತ್ತು ತಹಸೀಲ್ದಾರ್ ರವರು ನೀಡಿದ ದಾಖಲೆ ಒಂದು ಪತ್ರ ಆಗಿರುತ್ತದೆ. ತಹಸೀಲ್ದಾರ್ ರವರು ನೀಡಿದ ಪತ್ರವನ್ನು ನಾನು ಓದಿರುತ್ತೇನೆ. ಅದರೆ ಅವರು ಎಷ್ಟು ವರ್ಷಗಳ ಹಿಂದೆ ನೀಡಿರುತ್ತಾರೆ ಎಂಬುದು ನನಗೆ ನೆನಪಿಲ್ಲ. ತಹಸೀಲ್ದಾರ್ ರವರು ನೀಡಿದ ಪತ್ರದ ಬಗ್ಗೆ ನಮ್ಮ ತಕರಾರಿನಲ್ಲಿ ನಮೂದು ಮಾಡಿರುವುದಿಲ್ಲ ಮತ್ತು ಇದನ್ನು ನಮೂದು ಮಾಡಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ತಹಸೀಲ್ದಾರ್ ರವರು ನೀಡಿದ ಪತ್ರದ ಬಗ್ಗೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿರುವುದಿಲ್ಲ ಮತ್ತು ಇದನ್ನು ನಮೂದು ಮಾಡಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ಅಂಬೇಡ್ಕರ್ ಭವನದ ಜಾಗವನ್ನು ನೀಡಿರುತ್ತಾರೆ ಎಂದು ನೀವು ಹೇಳಿರುವೀರಾ ಅದರೆ ಈ ಜಾಗವು ವಾದಿಯ ಹಿಡುವಳಿ ಜಮೀನು ಆಗಿರುತ್ತದೆ ಮತ್ತು ನೀವು ಅಕ್ರಮಮವಾಗಿ ಆಕ್ರಮಿಸಿಕೊಳ್ಳಬೇಕೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕಛೇರಿಯಲ್ಲಿ ಇದ್ದ ದಾಖಲೆಗಳು ವಾದಿಗೆ ಸಂಬಂಧಪಟ್ಟ ದಾಖಲೆ ಆಗಿರುತ್ತದೆ ಮತ್ತು ಸದರಿ ದಾವಾ ಆಸ್ತಿಯೂ ಕೂಡ ವಾದಿಯ ಆಸ್ತಿ ಆಗಿರುತ್ತದೆ ಆದ್ದರಿಂದ ನಿಮ್ಮ ಬಳಿ ದಾವಾ ಆಸ್ತಿಗೆ ಸಂಬಂಧಪಟ್ಟಂತಹ ಯಾವುದೇ ಅಸಲು ದಾಖಲೆಗಳು ನಿಮ್ಮ ಕಛೇರಿಯಲ್ಲಿ ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಇದು ನಮಗೆ ಸಂಬಂಧಪಟ್ಟ ಆಸ್ತಿ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟಂತಹ ದಾಖಲೆಗಳನ್ನು ನ್ಯಾಯಾಲಯವು ಹಾಜರುಪಡಿಸಲು ಮಾಡಿದ್ದರೆ ನಿಮಗೆ ಯಾವುದೇ ನಷ್ಟ ಆಗುವುದಿಲ್ಲವೇ. ಎಂಬ ಪ್ರಶ್ನೆಗೆ ಸಾಕ್ಷಿಯು ಕೊಡಲು ಯಾವುದೇ ತೊಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ – ಲೋಲೇಶ್ ರವರ ಜಾಗ, ಪಶ್ಚಿಮಕ್ಕೆ –ರಸ್ತೆ , ಉತ್ತರಕ್ಕೆ –ರಸ್ತೆ , ದಕ್ಷಿಣಕ್ಕೆ –ಬಸವರಾಜಪ್ಪ ರವರ ಜಮೀನು ಇರುತ್ತದೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**